**ಸಾಕ್ಷಿಯನ್ನು ನ್ಯಾಯಾಲಯದ ಆದೇಶದ ಮೇರೆಗೆ ದಿನಾಂಕ 04.08.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎ.ಎನ್.ಎಸ್ ವಕೀಲರಿಂದಃ**

1. ನನ್ನ ತಂದೆಗೆ ಕೆಂಚಪ್ಪ ರವರಿಗೆ ಒಟ್ಟು 6 ಜನ ಮಕ್ಕಳು. ಅವರ ಹೆಸರು ನಿರ್ಮಲ, ನಾನು, 2 ನೇ ವಾದಿ ರವಿ ಕುಮಾರ್, ಪುಷಲತಾ, ಲಲಿತ ಮತ್ತು ಸಾವಿತ್ರಿ. ಸದರಿ ವಿಷಯವನ್ನು ವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆ ಪ್ರಮಾಣ ಪತ್ರ ಬರೆಸಿಲ್ಲ. ದಾವಾ ಸ್ವತ್ತು ಮೂಲತಃ ನನ್ನ ತಂದೆಗೆ ಸೇರಿದ್ದು ಎಂದರೆ ಸರಿ.

2. ನಾನು ಎಂ.ಎ., ಎಲ್.ಎಲ್.ಬಿ., ಪದವೀದರ. ನನಗೆ ಕಾನೂನು ಜ್ಞಾನ ಇದೆ.

3. ದಾವಾ ಷೆಡ್ಯೂಲ್ ಎ ಸ್ವತ್ತನ್ನು ನನ್ನ ತಂದೆ ರಾಜಣ್ಣ ಎಂಬುವವರಿಂದ ಖರೀದಿ ಮಾಡಿದ್ದರು. ಆ ಸಂಬಂಧ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ರಾಜಣ್ಣ ಸದರಿ ಸ್ವತ್ತನ್ನು ಯಾರಿಂದ ಖರೀದಿ ಮಾಡಿದ್ದರೂ ಎಂಬ ಬಗ್ಗೆ ನನ್ನ ತಂದೆಗೆ ಬರೆದುಕೊಟ್ಟ ಕ್ರಯ ಪತ್ರದಲ್ಲಿ ನಮೂದು ಮಾಡಲಾಗಿದೆ. ರಾಜಣ್ಣ ಖರೀದಿ ಮಾಡಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ಈಗ ನನಗೆ ತೋರಿಸಲಾದ ದಾಖಲೆ ಲಕ್ಷಮಣ ಬಿನ್ ಲಕ್ಕಪ್ಪರವರಿಂದ ರಾಜಪ್ಪ ದಾವಾ ಷೆಡ್ಯೂಲ್ ಎ ಸ್ವತ್ತನ್ನು ಖರೀದಿ ಮಾಡಿದ್ದ ಸಂಬಂಧ ಬರೆಯಲಾದ ನೊಂದಾಯಿತ ಕ್ರಯ ಪತ್ರದ ದೃಢಿಕೃತ ನಕಲು ಎಂದರೆ ಸರಿ. ಸಾಕ್ಷಿ ಒಪ್ಪಿಕೊಂಡ ದಾಖಲೆಯನ್ನು **ನಿಡಿ–1** ಎಂದು ಗುರುತಿಸಲಾಯಿತು. ನಿಡಿ–1 ರ ದಾಖಲೆಯ ಆಧಾರದಲ್ಲಿ ನನ್ನ ತಂದೆ ದಾವಾ

ಷೆಡ್ಯೂಲ್ ಎ ಸ್ವತ್ತನ್ನು ರಾಜಣ್ಣನಿಂದ ಖರೀದಿ ಮಾಡಿದ್ದರೂ ಎಂದರೆ ಸರಿ.

4. ಈಗ ನನಗೆ ತೋರಿಸಲಾದ ಮತ್ತೊಂದು ನೊಂದಾಯಿತ ಕ್ರಯ ಪತ್ರದ ದೃಢಿಕೃತ ನಕಲು ದಿನಾಂಕ 26.06.1990 ರಂದು ನನ್ನ ತಂದೆ ದಾವಾ ಷೆಡ್ಯೂಲ್ ಎ ಸ್ವತ್ತನ್ನು ರಾಜಣ್ಣನಿಂದ ಖರೀದಿ ಮಾಡಿದ ಸಂಬಂಧ ಬರೆಯಲಾದ ಕ್ರಯ ಪತ್ರ ಎಂದರೆ ಸರಿ. ಸಾಕ್ಷಿ ನೋಡಿ ಗುರುತಿಸಿದ ದಾಖಲೆಯನ್ನು **ನಿಡಿ–2** ಎಂದು ಗುರುತಿಸಲಾಯಿತು. ನಿಡಿ–2 ರ ದಾಖಲೆ ಪ್ರಕಾರ ರಾಜಪ್ಪನಿಂದ ನನ್ನ ತಂದೆ ಖರೀದಿ ಮಾಡಿದ ಆಸ್ತಿಯಲ್ಲಿ 15 ½ x 27 ಅಡಿ ವಿಸ್ತೀರ್ಣದ ಮನೆ ಹಾಗೆ ಅದಕ್ಕೆ ಹೊಂದಿಕೊಂಡ 15 ½ x 30 ವಿಸ್ತೀರ್ಣದ ಖಾಲಿ ಜಾಗ ಮತ್ತು ಒಟ್ಟು ವಿಸ್ತೀರ್ಣ 15 ½ x 57 ಅಡಿ ಎಂದು ನಮೂದಾಗಿದೆ ಎಂದರೆ ಸರಿ.

5. ದಾವಾ ಷೆಡ್ಯೂಲ್ ಎ ಸ್ವತ್ತಿನ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ನಮ್ಮದೇ ಸ್ವತ್ತು, ಉತ್ತರಕ್ಕೆ ಪ್ರತಿವಾದಿಯರ ತಂದೆ ಗಿರಿಯಪ್ಪನ ಸ್ವತ್ತು ಮತ್ತು ದಕ್ಷಿಣಕ್ಕೆ ಮೈಲಾರಪ್ಪನ ಸ್ವತ್ತು ಇದೆ ಎಂದರೆ ಸರಿ. ನಾನು ಒಪ್ಪಿಕೊಂಡ ಹಾಗೂ ಮೇಲೆ ಹೇಳಿದ ಚಕ್ಕುಬಂಧಿಯನ್ನು ವಾದ ಪತ್ರದಲ್ಲಿ ಬರೆಸಿದ್ದೇನೆ. ವಾದ ಪತ್ರದಲ್ಲಿ ದಾವಾ ಷೆಡ್ಯೂಲ್ ಎ ಸ್ವತ್ತಿಗೆ ತಪ್ಪು ಚಕ್ಕುಬಂಧಿ ನಮೂದು ಮಾಡಲಾಗಿದೆ ಎಂದರೆ ಸರಿಯಲ್ಲ.

6. ದಾವಾ ಸ್ವತ್ತಿಗೆ ಸಂಬಂಧಪಟ್ಟ ಇ ಸ್ವತ್ತು ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ಖಾತೆ ದಾಖಲೆಗಳನ್ನು ಕೊಟ್ಟಿದ್ದೇನೆ. ಈಗ ನನಗೆ ತೋರಿಸಲಾದ ದಾಖಲೆಯೇ ದಾವಾ ಷೆಡ್ಯೂಲ್

ಎ ಸ್ವತ್ತಿಗೆ ಸಂಬಂಧಪಟ್ಟ ಖಾತೆ ದಾಖಲೆಯ ಪ್ರತಿಯಾಗಿದ್ದು ಅದನ್ನು ನ್ಯಾಯಾಲಯಕ್ಕೆ ನಾನೇ ಕೊಟ್ಟಿದ್ದೇನೆ ಎಂದರೆ ಸರಿ. ಸಾಕ್ಷಿ ನೋಡಿ ಗುರುತಿಸಿದ ದಾಖಲೆಯನ್ನು **ನಿಡಿ–3** ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿ ದಾವಾ ಷೆಡ್ಯೂಲ್ ಎ ಸ್ವತ್ತಿನ ವಿಸ್ತೀರ್ಣ 15 ½ x 27 ಅಡಿ ಎಂದು ನಮೂದು ಮಾಡಲಾಗಿದೆ ಎಂದರೆ ಸರಿ. ಉಳಿದ ಜಾಗಕ್ಕೆ ದಾಖಲೆ ಯಾಕೆ ಸಲ್ಲಿಸಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ದಾಖಲೆ ಇಲ್ಲ ಎನ್ನುತ್ತಾರೆ.

7. ದಾವಾ ಷೆಡ್ಯೂಲ್ ಬಿ ಸ್ವತ್ತಿನ ಚಕ್ಕುಬಂಧಿಯನ್ನು ನನಗೆ ಹೇಳಲು ಆಗುವುದಿಲ್ಲ. ಅದರ ಚಕ್ಕುಬಂಧಿ ಬಗ್ಗೆ ನನಗೆ ಮಾಹಿತಿ ಇದೆ. ಬಿ ಷೆಡ್ಯೂಲ್ ಸ್ವತ್ತು ನಮ್ಮದು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ಯಾವ ದಾಖಲೆ ಕೊಟ್ಟಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿ ಕಂದಾಯ ಪಾವತಿ ರಶೀದಿ ಕೊಟ್ಟಿದ್ದೀನಿ ಎನ್ನುತ್ತಾರೆ. ಸದರಿ ಸ್ವತ್ತು 15 ½ x 70 ಅಡಿ ವಿಸ್ತೀರ್ಣ ಇದೆ ಎಂದು ತೋರಿಸಲು ಕ್ರಯ ಪತ್ರ ಕೊಟ್ಟಿದ್ದೇನೆ. ಆ ರೀತಿ ಯಾವುದೇ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ರಾಜಣ್ಣ ರವರಿಗೆ ಸದರಿ ಸ್ವತ್ತು ಯಾವ ರೀತಿ ಬಂತು ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ.

8. ನಿ.ಪಿ.–14 ರ ದಾಖಲೆಯನ್ನು ನಮ್ಮ ಅನುಕೂಲಕ್ಕಾಗಿ ರಾಜಣ್ಣ ರವರ ಮೂಲಕ ಸೃಷ್ಟಿಮಾಡಿಲಾಗಿದೆ ಎಂದರೆ ಸರಿಯಲ್ಲ. ನಿ.ಪಿ.–14 ರ ದಾಖಲೆಗೆ ಪೂರಕವಾಗಿ ನಿ.ಪಿ.–15 ರ ದಾಖಲೆಯನ್ನು ಸೃಷ್ಟಿಮಾಡಲಾಗಿದೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಬಿ ಸ್ವತ್ತಿಗೆ ಇ–ಸ್ವತ್ತು ದಾಖಲೆ ಇಲ್ಲ. ಖಾತೆ ಎಕ್ಸಟ್ರಾಕ್ಟ್ ಇದೆ. ಅದನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಆ ರೀತಿ

ಯಾವುದೇ ಕೊಟ್ಟಿಲ್ಲ ಎಂದು ಪುನಃ ಪ್ರಶ್ನಿಸಿದರೆ ಸಾಕ್ಷಿ ಸರಿ ಎನ್ನುತ್ತಾರೆ. ನಾವು ಕೊಟ್ಟ ಸುಳ್ಳು ಮಾಹಿತಿ ಆಧಾರದಲ್ಲಿ ನಗರ ಸಭೆಯವರು ನಿ.ಪಿ.–13 ಮತ್ತು 15 ರ ದಾಖಲೆಯನ್ನು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಿ.ಪಿ.–13 ಮತ್ತು 15 ರ ದಾಖಲೆಗಳನ್ನು ಪಡೆಯಲು ನಗರ ಸಭೆಗೆ 2025 ರಲ್ಲಿ ಅರ್ಜಿ ಕೊಟ್ಟಿದ್ದೆವು. 1987 ರಿಂದ 2025 ರವರೆಗೆ ಖಾತೆ ದಾಖಲೆಗಳನ್ನು ನಿಮ್ಮ ಹೆಸರಿಗೆ ಮಾಡಿಸಿಕೊಳ್ಳಲು ಸಾಮಾನ್ಯ ಜ್ಞಾನ ಇರಲಿಲ್ಲವೇ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಬೇರೆ ಕೆಲಸ ಇತ್ತು ಮತ್ತು ಆ ಮಧ್ಯೆ ಮೋಸದಿಂದ ದಾಖಲೆ ಮಾಡಿಕೊಂಡಿದ್ದಾರೆ ಎನ್ನುತ್ತಾರೆ. ಮೋಸದಿಂದ ಮಾಡಿಕೊಳ್ಳಲಾಗಿದೆ ಎನ್ನಲಾದ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಯಾವ ದಾಖಲೆಯನ್ನು ಕೊಟ್ಟಿದ್ದೀರಿಎಂಬ ಪ್ರಶ್ನೆಗೆ ಸಾಕ್ಷಿ ನಿ.ಪಿ.–6 ರ ದಾಖಲೆಯನ್ನು ಕೊಟ್ಟಿದ್ದೀನೆ ಎನ್ನುತ್ತಾರೆ. ನಿ.ಪಿ.–6 ರ ದಾಖಲೆಯನ್ನು 15 ½ x 70 ಅಡಿ ಜಾಗಕ್ಕೆ ಸಂಬಂಧಪಟ್ಟಂತೆ ಕೊಟ್ಟಿದ್ದೀನಿ. ಸದರಿ ಜಾಗವನ್ನು ಒತ್ತುವರಿ ಮಾಡಲಾಗಿದೆ ಎಂಬ ಕಾರಣಕ್ಕೆ ನಿ.ಪಿ.–6 ರ ಅರ್ಜಿ ಕೊಟ್ಟಿದ್ದೆ. ಒತ್ತುವರಿ ಆಗಿದೆ ಎನ್ನಲಾದ ದಾವಾ ಷೆಡ್ಯೂಲ್ ಬಿ ಸ್ವತ್ತಿನಲ್ಲಿ ನೀವು ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸಾಕ್ಷಿ ಸ್ವಾಧೀನ ಇದ್ದೇನೆ ಎನ್ನುತ್ತಾರೆ.

9. ಬಿ ಸ್ವತ್ತನ್ನು ಒತ್ತುವರಿ ಮಾಡಲಾಗಿದೆ ಎಂದು ನಾನು ನಗರ ಸಭೆಗೆ ಅರ್ಜಿ ಕೊಟ್ಟ ನಂತರ ಸದರಿಯವರು ಕ್ರಮ ಕೈ ಗೊಂಡಿಲ್ಲ ಎನ್ನುತ್ತಾರೆ. ಬಿ ಸ್ವತ್ತನ್ನು ಪ್ರತಿವಾದಿ ಒತ್ತುವರಿ ಮಾಡಿದ್ದಾರೆ ಎಂದು ನನಗೆ ಪ್ರತಿವಾದ ಪತ್ರದಲ್ಲಿ ಬರೆಸಿದ್ದೇನೆ, ಆ ರೀತಿ ವಾದ ಪತ್ರದಲ್ಲಿ ಬರೆಸದೆ ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

10. ನನ್ನ ವಿರುದ್ಧ ಹಲವು ಕ್ರಿಮಿನಲ್ ಪ್ರಕರಣಗಳು ದಾಖಲಾಗಿದೆ ಎಂದರೆ ಸರಿಯಲ್ಲ. ಆಶಾ ಎಂಬುವವರು ನನ್ನ ಮತ್ತು 2 ನೇ ವಾದಿ ಮತ್ತಿತರ ಮೇಲೆ ಹಳೆ ನಗರ ಪೊಲೀಸ್ ಠಾಣೆಗೆ ದೂರು ಕೊಟ್ಟಿದ್ದಾರೆ ಎಂದರೆ ಸಾಕ್ಷಿ ದೂರು ಕೊಟ್ಟಿದ್ದಾರೆ ಆದರೆ ಆರೋಪ ಸಾಬೀತಾಗಿಲ್ಲ ಎನ್ನುತ್ತಾರೆ. 1 ಮತ್ತು 4 ನೇ ಪ್ರತಿವಾದಿಯೂ ಸಹ ನನ್ನ ಮತ್ತು 2 ನೇ ವಾದಿ ಮೇಲೆ ಹಳೆ ನಗರ ಪೊಲೀಸರಿಗೆ ದೂರು ಕೊಟ್ಟಿದ್ದಾರೆ ಎಂದರೆ ಸರಿ. ಈಗ ನನಗೆ ತೋರಿಸಲಾದ ದಾಖಲೆಗಳು ನನ್ನ ವಿರುದ್ಧ ದಾಖಲಾಗಿರುವ ಪ್ರಕರಣಗಳಿಗೆ ಸಂಬಂಧಪಟ್ಟ ಪ್ರಥಮ ವರ್ತಮಾನ ವರದಿಗಳು ಎಂದರೆ ಸರಿ. ಸಾಕ್ಷಿ ನೋಡಿ ಗುರುತಿಸಿದ ದಾಖಲೆಗಳನ್ನು **ನಿಡಿ–4 ರಿಂದ 6** ಎಂದು ಗುರುತಿಸಲಾಯಿತು. ಸಾಕ್ಷಿ ಪುನಃ ಸುಳ್ಳು ದೂರುಗಳನ್ನು ದಾಖಲಲಾಗಿದೆ ಎನ್ನುತ್ತಾರೆ. 1 ನೇ ಪ್ರತಿವಾದಿ ನನ್ನ ಮತ್ತು 2 ನೇ ವಾದಿ ಮತ್ತಿತರ ಮೇಲೆ ದೂರು ಕೊಟ್ಟಿದ್ದಾರೆ ಎಂದರೆ ಸರಿ.

**ಈ ಹಂತದಲ್ಲಿ ಪ್ರತಿವಾದಿಯರ ಪರ ವಕೀಲರು ಕಾಲವಾಕಾಶ ಕೋರಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**Sd/-**

**C/c 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**